ಮಾನವ ಸಂಪನ್ಮೂಲ ವಿಭಾಗ/मानव संसाधन अनुभाग/**HUMAN RESOURCES SECTION**
ಭಾರತೀಯ ವಿಜ್ಞಾನ ಸಂಸ್ಥೆ/भारतीय विज्ञान संस्थान/**INDIAN INSTITUTE OF SCIENCE**
ಬೆಂಗಳೂರು/बेंगलूरु/**BENGALURU – 560012**
ದೂರವಾಣಿ/दूरभाष/**TELEPHONE : 080-2293-2493**
ಇ-ಮೇಲ್/**E-mail**/ईमेल : recruitment.council@iisc.ac.in

# Advertisement No.R(HR)308-2023 Dated

## ಜಾಹಿರಾತು ಸಂಖ್ಯೆ ಆರ್ (ಎಚ್ಆರ್)/308-2023 ದಿನಾಂಕ 29/04/2023

ವಿಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಗಾಗಿ ಭಾರತ ಸರ್ಕಾರದಿಂದ ಧನಸಹಾಯ ಪಡೆದಿರುವ ಪ್ರಧಾನ ಕೇಂದ್ರೀಯ ಅನುದಾನಿತ ತಾಂತ್ರಿಕ ಸಂಸ್ಥೆಯಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ರಾಷ್ಟ್ರಕ್ಕೆ ಪ್ರಮುಖ ಕೊಡುಗೆಗಳನ್ನು ನೀಡಿ ಒಂದು ಶತಮಾನವನ್ನು ಪೂರ್ಣಗೊಳಿಸಿದೆ. ಸಂಸ್ಥೆಯು ಹೊಸ ಮೂಲಸೌಕರ್ಯಗಳು (ಕಟ್ಟಡಗಳ ಸ್ಥಾಪನೆ), ಹಲವಾರು ಹೊಸ ಅಂತರಶಿಸ್ತೀಯ ಕಾರ್ಯಕ್ರಮಗಳು ಮತ್ತು ಮೇಧಾವಿ ಅಧ್ಯಾಪಕರುಗಳನ್ನು ಒಳಗೊಂಡು ಮುಂದುವರಿದ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ವಿಶ್ವ ನಾಯಕನಾಗುವ ಉದ್ದೇಶವನ್ನು ಹೊಂದಿದ್ದು ಅದರಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಈ ನಿಟ್ಟಿನಲ್ಲಿ, ಸಂಸ್ಥೆಯು ಈ ಕೆಳಗಿನ ಹುದ್ದೆಗೆ ನೇರ ನೇಮಕಾತಿ ಅಥವಾ ಗುತ್ತಿಗೆ ಆಧಾರದ ಮೇಲೆ ಅಥವಾ ವಿದೇಶಿ ಸೇವೆಯ ಆಧಾರದ ಮೇಲೆ ಸಂಸ್ಥೆಗೆ ಅನ್ವಯವಾಗುವ ಭಾರತ ಸರ್ಕಾರದ ಪ್ರಮಾಣಿತ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ವಿಭಾಗ | ಖಾಲಿ ಹುದ್ದೆಗಳ ಒಟ್ಟು ಸಂಖ್ಯೆ **(01.10.2023 ಅನುಗುಣವಾಗಿ)** | ವಯೋಮಿತಿ **(ಜಾಹೀರಾತಿನ ಕೊನೆಯ ದಿನಾಂಕಕ್ಕೆ ಅನ್ವಯಿಸುವಂತೆ)** | ಅಧಿಕಾರಾವಧಿ | ವೇತನ ಶ್ರೇಣಿ |
|---|---|---|---|---|---|---|

| | | | | | | |
|---|---|---|---|---|---|---|
| 1. | **ಆರ್ಥಿಕ ನಿಯಂತ್ರಕರು** | **ಹಣಕಾಸು ಮತ್ತು ಲೆಕ್ಕಪತ್ರ** | 01(ಕಾಯ್ದಿರಿಸದ) | 55 ವರ್ಷ | **ನೇರ ನೇಮಕಾತಿ (ಅಥವಾ) ಡೆಪ್ಯುಟೇಶನ್/ಕಾಂಟ್ರಾಕ್ಟ್ ಅಥವಾ ಗುತ್ತಿಗೆ ಆಧಾರದ ಮೇಲೆ 5 ವರ್ಷಗಳ ಅಧಿಕಾರಾವಧಿವರೆಗೆ ಅಥವಾ 62 ವರ್ಷಾವಧಿವರೆಗೆ ಯಾವುದಾದರೂ ಕರ್ನಾಟಕ ಸರ್ಕಾರದಿಂದ ತ್ವರಿತವಾಗಿ ನಿಗದಿಪಡಿಸಿದ ಆದೇಶಗಳನ್ನು ಕಾಲಕಾಲಕ್ಕೆ ಹೊರಡಿಸಿದಂತೆ** | ಪಿಬಿ-4: 37400-6700 + ಜಿಪಿ 10000 [7ನೇ ಸಿಪಿಸಿಯ 14ನೇ ಹಂತದಲ್ಲಿ(ರೂ. 1,44,200- ರೂ. 2,18,200)] |

**ನಿಗದಿತ ಕನಿಷ್ಠ ವಿದ್ಯಾರ್ಹತೆ/ಅನುಭವ:**

**ವಿದ್ಯಾರ್ಹತೆ:** ಕನಿಷ್ಠ 55% ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಅಥವಾ ಅದಕ್ಕೆ ಸಮಾನ ವ್ಯಾಸಂಗ.

**ಕಾರ್ಯಾನುಭವ:** ಹಣಕಾಸು ಮತ್ತು ಲೆಕ್ಕಪತ್ರ ವಿಭಾಗದಲ್ಲಿ 15 ವರ್ಷಗಳ ಅನುಭವ, ಇದರಲ್ಲಿ 7600 ರೂ.ವೇತನ ಶ್ರೇಣಿಯೊಂದಿಗೆ ಉಪ ಕುಲಸಚಿವರಾಗಿ 8 ವರ್ಷಗಳ ಅನುಭವವಿರಬೇಕು ಅಥವಾ ಅದಕ್ಕೆ ಸಮನಾದ ಸ್ಥಾನ ಅಥವಾ ಸಂಶೋಧನಾ ಸಂಸ್ಥೆಗಳಲ್ಲಿ ಅದಕ್ಕೆ ಹೋಲಿಸಬಹುದಾದಂತಹ ಅನುಭವ ಮತ್ತು/ಅಥವಾ ಇನ್ನಿತರ ಉನ್ನತ ಶಿಕ್ಷಣ ಸಂಸ್ಥೆಗಳು.

**ಅಪೇಕ್ಷಣೀಯ**: ಹಣಕಾಸು/ ಲೆಕ್ಕಪತ್ರ ನಿರ್ವಹಣೆ, ಸೇವಾನಿಯಮಗಳು, ಕಾರ್ಪೊರೇಟ್ ಲೆಕ್ಕಪತ್ರ ನಿರ್ವಹಣೆ ಮತ್ತು ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ/ವಿಶ್ವವಿದ್ಯಾಲಯ/ಆರ್&ಡಿ ಸಂಸ್ಥೆಗಳ ನಿಯಮಗಳು ಮತ್ತು ನಿಬಂಧನೆಗಳ ಬಗ್ಗೆ ಉತ್ತಮ ಕೆಲಸದ ಜ್ಞಾನ. ತಂಡದ ನಾಯಕನಾಗಿ ನಾಯಕತ್ವದ ಗುಣ, ಹೊಂದಿಕೊಳ್ಳುವಿಕೆ ಮತ್ತು ಕೆಲಸ ಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು.

**ಕೆಲಸದ ವಿವರ**: ಆಯ್ಕೆಯಾದ ಅಭ್ಯರ್ಥಿಗಳು ಆಡಳಿತ/ಹಣಕಾಸು ವಿಭಾಗದ ಡೀನ್/ಡೈರೆಕ್ಟರ್‌ಗೆ ವರದಿ ಮಾಡಿಕೊಳ್ಳಬೇಕು. ಅವರು (i) ಸಂಸ್ಥೆಯ ಹಣಕಾಸು ಮತ್ತು ಲೆಕ್ಕಪತ್ರ ವಿಭಾಗದ ಉಸ್ತುವಾರಿಯನ್ನು ತಕ್ಷಣಕ್ಕೇ ವಹಿಸಿಕೊಳ್ಳುತ್ತಾರೆ.
(ii) ಆಂತರಿಕ ಹಣಕಾಸು ಸಲಹೆಗಾರರಾಗಿ ಕಾರ್ಯ ನಿರ್ವಹಿಸುತ್ತಾರೆ.
(iii) ನಿಧಿಯ ಹರಿವಿನ ಮೇಲ್ವಿಚಾರಣೆ, ಬಜೆಟ್ ನಿಯಂತ್ರಣ, ಅನುದಾನಗಳ ನಿರ್ವಹಣೆ, ಹೂಡಿಕೆಗಳ ಮಾರ್ಗ ಮತ್ತು ವಿಧಾನಗಳ ನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ.

(iv) ಹಣಕಾಸು ವಿಮರ್ಶೆ/ನಿಯಂತ್ರಣದ ಸಮೀಕ್ಷೆಗಳನ್ನು ನಿಯತಕಾಲಿಕವಾಗಿ ತಯಾರಿಸುತ್ತಾರೆ ಮತ್ತು
(v) ಕಾಲಕಾಲಕ್ಕೆ ನಿಯೋಜಿಸಲ್ಪಡುವ ಇತರ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಸರ್ಕಾರವು ಅದರ ಪರವಾಗಿ ಕೆಲವು ಉನ್ನತ ಶಿಕ್ಷಣ ಸಂಸ್ಥೆಗಳ ಪಟ್ಟಿಯನ್ನು ನೀಡಿದೆ. ಅವುಗಳು ಭಾರತದ ಉನ್ನತ ಶಿಕ್ಷಣ ಇಲಾಖೆ, ಶಿಕ್ಷಣ ಸಚಿವಾಲಯದ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ.

ಅಂತಹ ವಿಶೇಷ ಸಂಸ್ಥೆಗಳ ಪಟ್ಟಿ ಕೆಳಕಂಡಂತಿದೆ:-

ಅ) ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ: https://www.education.gov.in/institutions-national-importance

ಆ) ಕೇಂದ್ರೀಯ ವಿಶ್ವವಿದ್ಯಾಲಯಗಳು: https://www.education.gov.in/central-universities-0

ಇ) ರಾಜ್ಯ ವಿಶ್ವವಿದ್ಯಾಲಯಗಳು: - https://www.education.gov.in/state-universities

ಈ) MoE ಅನುದಾನಿತ ತಾಂತ್ರಿಕ ಸಂಸ್ಥೆಗಳು: https://www.education.gov.in/technical-education-1

**ನಿಯಮಗಳು ಮತ್ತು ಷರತ್ತುಗಳು:**

1. ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು. ನಿಗದಿತ ವಿದ್ಯಾರ್ಹತೆ ಕನಿಷ್ಠ ಅರ್ಹತೆಯಾಗಿದ್ದು, ಅಭ್ಯರ್ಥಿಯು ಅದನ್ನು ಹೊಂದಿದ್ದಾರೆ ಎಂಬ ಮಾತ್ರಕ್ಕೆ ಸಂದರ್ಶನಕ್ಕೆ ಅವರನ್ನು ಕರೆಯಲು ಅರ್ಹತೆ ಇದೆ ಎಂದೇನಲ್ಲ. ಅರ್ಹತೆ ಮತ್ತು/ಅಥವಾ ಅನುಭವದ ಆಧಾರದ ಮೇಲೆ ಸಂದರ್ಶನಕ್ಕೆ ಪ್ರವೇಶ ಪಡೆಯುವ ಅಭ್ಯರ್ಥಿಗಳ ಸಂಖ್ಯೆಯನ್ನು ನಿರ್ಬಂಧಿಸುವ ಹಕ್ಕನ್ನು ಸಂಸ್ಥೆ ಕಾಯ್ದಿರಿಸಿದೆ.

2. ವಯೋಮಿತಿಯಲ್ಲಿನ ಸಡಿಲಿಕೆಯು ಭಾರತ ಸರ್ಕಾರದ ನಿಯಮಗಳ ಪ್ರಕಾರ ಸಂಸ್ಥೆಗೆ ಅನ್ವಯವಾಗುವಂತೆ ಇರುತ್ತದೆ. ಗರಿಷ್ಠ ವಯೋಮಿತಿ ಸಡಿಲಿಕೆಯು (ಎಲ್ಲಾ ಷರತ್ತುಗಳನ್ನು ಒಳಗೊಂಡು) 57 ವರ್ಷಗಳು.

3. ದಿವ್ಯಾಂಗ ಅಭ್ಯರ್ಥಿಗಳು ಅಂದರೆ, ಮೂಳೆ ಊನಗೊಂಡಿರುವುದು/ಕೈ, ಕಾಲುಗಳ ನ್ಯೂನತೆ/ ಸೆರೆಬ್ರಲ್ ಪಾಲ್ಸಿಯಿಂದ ಒಂದು ಕಾಲು ಊನಗೊಂಡಿರುವುದು (ಬಲ ಅಥವಾ ಎಡ) (ಒ ಎಲ್) ಅಥವಾ ಒಂದು ತೋಳು ಊನಗೊಂಡಿರುವುದು (ಬಲ ಅಥವಾ ಎಡ) (ಒ ಎ) ಅಥವಾ ದೃಷ್ಟಿದೋಷ (ಬಿ) ಅಥವಾ ಅರೆ ದೃಷ್ಟಿದೋಷ (ಎಲ್ ವಿ) ಮತ್ತು ಶ್ರವಣ ದೋಷ ಉಳ್ಳವರೂ ಕೂಡ ಅರ್ಜಿ ಸಲ್ಲಿಸಬಹುದು.

4. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಯಾವುದೇ ವಿಷಯದಲ್ಲಿ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಭೌತಿಕ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

5. ಆನ್‌ಲೈನ್ ಅರ್ಜಿಯಲ್ಲಿ ಭರ್ತಿ ಮಾಡಿದ ಎಲ್ಲಾ ವಿವರಗಳನ್ನು ಅಂತಿಮವೆಂದು ಪರಿಗಣಿಸಲಾಗುತ್ತದೆ ಮತ್ತು ಅದರ ನಂತರ ನೀಡುವ ಯಾವುದೇ ಬದಲಾವಣೆಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಇಡೀ ನೇಮಕಾತಿ ಪ್ರಕ್ರಿಯೆಗೆ ಅದನ್ನೇ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಪ್‌ಲೋಡ್ ಮಾಡುವ ದಾಖಲೆಗಳು ಸ್ಪಷ್ಟವಾಗಿ ಗೋಚರಿಸುವಂತಿರಬೇಕು.

6. PSU /ಸ್ವಾಯತ್ತ ಸಂಸ್ಥೆಗಳಲ್ಲಿ ವಿವಿಧ ವೇತನ ಶ್ರೇಣಿಗಳನ್ನು ಹೊಂದಿದ್ದು ಅದರ ಅನುಭವ ಪ್ರಮಾಣಪತ್ರಗಳನ್ನು ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಅನುಭವದ ಪರಿಗಣನೆಗೆ ತಕ್ಕಂತೆ ಸಮಾನತೆಯ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದರೆ,ಅನುಭವವನ್ನು ಪರಿಗಣಿಸಲಾಗುವುದಿಲ್ಲ.

7. ಅನುಭವ ಪ್ರಮಾಣಪತ್ರ(ಗಳು) ಅರ್ಜಿಯಲ್ಲಿ ನೀಡಲಾಗಿರುವ  ಪ್ರಕಾರದಲ್ಲಿರಬೇಕು. ಅದನ್ನು ನೀಡಿರುವ ದಿನಾಂಕದೊಂದಿಗೆ ಉದ್ಯೋಗದಾತರ ಸಂಸ್ಥೆಯ ಲೆಟರ್ ಹೆಡ್‌ನಲ್ಲಿರಬೇಕು.

8. ಕೇಂದ್ರ/ರಾಜ್ಯ ಸರ್ಕಾರಗಳು ಅಥವಾ ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿದ ಸಂಸ್ಥೆಗಳು ಅಥವಾ ವಿಶ್ವವಿದ್ಯಾಲಯಗಳು/ ವಿಶ್ವವಿದ್ಯಾಲಯ ಮಟ್ಟದ ಸಂಸ್ಥೆಗಳು ಅಥವಾ ಸಾರ್ವಜನಿಕ ವಲಯದ (ಪಿಎಸ್‌ಯು) ಸಂಸ್ಥೆಗಳಿಂದ ಡೆಪ್ಯುಟೇಶನ್/ಗುತ್ತಿಗೆ ಅಧಿಕಾರಿಗಳ ನಿಯೋಜನೆಯನ್ನು ಈ ಕೆಳಗೆ ನಮೂದಿಸಿದ ಸಂದರ್ಭದಲ್ಲಿ ಪರಿಗಣಿಸಬಹುದು

i. ಸಮಾನಾಂತರ ಹುದ್ದೆಯಲ್ಲಿರುವ ಅಧಿಕಾರಿ/ಅಥವಾ
ii. ನೇಮಕಾತಿಗಾಗಿ ಜಾಹಿರಾತಿನಲ್ಲಿ ನಿಗದಿಪಡಿಸಿರುವ ಶೈಕ್ಷಣಿಕ ಅರ್ಹತೆ ಮತ್ತು ಅನುಭವವನ್ನು ಹೊಂದಿರುವ ಅಧಿಕಾರಿ.

9. ಆರ್ಥಿಕ ನಿಯಂತ್ರಕರ ಹುದ್ದೆಗೆ ಆಯ್ಕೆಯು ಸಂದರ್ಶನದ ಮೂಲಕ ಇರುತ್ತದೆ. ಆದಾಗ್ಯೂ,ಅಗತ್ಯವೆಂದು ಭಾವಿಸಿದರೆ ಲಿಖಿತ ಪರೀಕ್ಷೆಯನ್ನು ನಡೆಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

10. ಎಲ್ಲಾ ಅಭ್ಯರ್ಥಿಗಳು ಪ್ರಸಕ್ತ ಉದ್ಯೋಗದಾತರಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದುಕೊಳ್ಳಬೇಕು ಮತ್ತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಒಂದುವೇಳೆ ಪ್ರಮಾಣಪತ್ರಗಳ ಪರಿಶೀಲನೆಯ ಸಮಯದಲ್ಲಿ ಎನ್‌ಒಸಿ ಸಲ್ಲಿಸಲಾಗುವುದು ಎಂದು ಸಮರ್ಪಕವಾಗಿ ಸಹಿ ಮಾಡಿದ ಒಪ್ಪಂದದ ಜೊತೆಗೆ ವಿಜಿಲೆನ್ಸ್ ಕ್ಲಿಯರೆನ್ಸ್ ಅನ್ನು ಅಭ್ಯರ್ಥಿಯು ಅಪ್‌ಲೋಡ್ ಮಾಡಿದಲ್ಲಿ ಎನ್‌ಒಸಿ ಇಲ್ಲದ ಅರ್ಜಿಯನ್ನು ಸಹ ಪರಿಗಣಿಸಲಾಗುತ್ತದೆ.

11. ಅಭ್ಯರ್ಥಿಗಳು ವಿದೇಶಿ ಸೇವಾ ನಿಯಮಗಳ ಮೇಲೆ ಸೇರಲು ಸಿದ್ದರಿದ್ದಲ್ಲಿ, ಅವರ ಸಂಸ್ಥೆಗಳು ಅಂತಹ ನಿಯಮಗಳ ಮೇಲೆ ಅವರನ್ನು ಬಿಡುಗಡೆ ಮಾಡಲು ಸಿದ್ದರಿರಬೇಕು.

12. ಅಭ್ಯರ್ಥಿಗಳು ಕೊನೆಯ ದಿನಾಂಕದವರೆಗೆ ಕಾಯದೆ, ಮುಂಚಿತವಾಗಿ ಅರ್ಜಿಯನ್ನು ಸಲ್ಲಿಸುವಂತೆ ಅರ್ಜಿದಾರರನ್ನು ಪ್ರೋತ್ಸಾಹಿಸಲಾಗುತ್ತದೆ.

13.  ಸೀಮಿತ ಪಟ್ಟಿಗೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನಕ್ಕೆ ಹಾಜರಾಗಲು ಆಹ್ವಾನ ಪತ್ರಗಳನ್ನು ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ. ಅಭ್ಯರ್ಥಿಗಳು ತಮ್ಮ ನೋಂದಾಯಿತ ಇ-ಮೇಲ್‌ಗಳನ್ನು ಆಗಾಗ್ಗೆ ಪರಿಶೀಲಿಸುತ್ತಿರಬೇಕು. ಸೀಮಿತ ಪಟ್ಟಿಗೆ ಆಯ್ಕೆಯಾಗದ/ ಸಂದರ್ಶನಕ್ಕೆ ಅರ್ಹತೆ ಹೊಂದಿರದ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರಗಳನ್ನು ಮಾಡಲಾಗುವುದಿಲ್ಲ.

14.  ಯಾವುದೇ ಕಾರಣ ನೀಡದೆ ಯಾವುದೇ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಈ ನಿಟ್ಟಿನಲ್ಲಿ ಯಾವುದೇ ಪತ್ರ ವ್ಯವಹಾರವನ್ನು ನಡೆಸಲಾಗುವುದಿಲ್ಲ.ಆಡಳಿತಾತ್ಮಕ ಕಾರಣದಿಂದ ಯಾವುದೇ ಹಂತದಲ್ಲಿ ಜಾಹಿರಾತು/ ನೇಮಕಾತಿಯನ್ನು ರದ್ದುಗೊಳಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

15.  ಸಂದರ್ಶನವನ್ನು ಆನ್‌ಲೈನ್ ಮೂಲಕ ಅಥವಾ ಭೌತಿಕವಾಗಿ ನಡೆಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಸಂದರ್ಶನಕ್ಕೆ ಕರೆಯಲಾದ ಹೊರಗಿನ ಸ್ಥಳದ ಅರ್ಹ ಅಭ್ಯರ್ಥಿಗಳಿಗೆ, ಅವರ ಸ್ಥಳದಿಂದ ಬೆಂಗಳೂರಿಗೆ ಆಗಮಿಸುವ ಅತಿ ಕಡಿಮೆ ದೂರದ ಮಾರ್ಗದಲ್ಲಿನ ರೈಲು ಪ್ರಯಾಣದ ಎಸಿ ದ್ವಿತೀಯ ದರ್ಜೆ (2nd AC)  ಟಿಕೇಟು ಶುಲ್ಕವನ್ನು ಪಾವತಿಸಲಾಗುತ್ತದೆ.

16.  ಸೇವೆಯ ಅವಧಿಯಲ್ಲಿ ಪ್ರತಿಯೊಬ್ಬ ಉದ್ಯೋಗಿಯು ಯೋಜನೆ, ನಿಯಮಗಳು ಮತ್ತು ಬೈಲಾಗಳು (SRB),  ಆಡಳಿತಾತ್ಮಕ ಕೈಪಿಡಿಗಳು, ಇತರ ಶಾಸನಬದ್ಧ ದಾಖಲೆಗಳು, CCS (ನಡವಳಿಕೆ) ನಿಯಮಗಳು ಮತ್ತು CCS (CCA) ನಿಯಮಗಳು ಇತ್ಯಾದಿಗಳನ್ನು ಗಮನಿಸಬೇಕು, ಬದ್ಧವಾಗಿರಬೇಕು ಮತ್ತು ಪಾಲಿಸಬೇಕು.

17. ಸಂಸ್ಥೆಯ ಸೇವೆಗೆ ಜನವರಿ 1, 2004 ರ ಅಥವಾ ನಂತರ ನೇಮಕಗೊಂಡ ಎಲ್ಲಾ ಉದ್ಯೋಗಿಗಳು ಹೊಸ ಪಿಂಚಣಿ ಯೋಜನೆ ವ್ಯಾಪ್ತಿಗೆ ಬರುತ್ತಾರೆ. 31-2-2003ಕ್ಕೆ ಮುಂಚಿತವಾಗಿ ಸೇರ್ಪಡೆಯಾದ ಉದ್ಯೋಗಿಗಳು 1972ರ ಸಿಸಿಎಸ್ (ಪಿಂಚಣಿ) ನಿಯಮಾವಳಿ ಅನ್ವಯ ಭಾರತ ಸರ್ಕಾರ ಸೂಚಿಸಿರುವ ಜಿಪಿಎಫ್ ಪಿಂಚಣಿ ಮತ್ತು ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

18. ಅಭ್ಯರ್ಥಿ ಸಲ್ಲಿಸಿದ ಪೂರ್ವ ಮಾಹಿತಿ ಅಥವಾ ದಾಖಲೆಗಳನ್ನು ಅವರ ಸೇವಾವಧಿಯ ಯಾವುದೇ ಸಮಯದಲ್ಲಿ ಪರಿಶೀಲಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಅಭ್ಯರ್ಥಿಯು ಸಲ್ಲಿಸಿರುವ ದಾಖಲೆಗಳು ಅಸಲಿ ಅಲ್ಲ ಎಂದು ಕಂಡುಬಂದಲ್ಲಿ, ನಂತರದ ಅವರ ಸೇವೆಯನ್ನು ಕೊನೆಗೊಳಿಸಲಾಗುತ್ತದೆ ಮತ್ತು ಶಿಸ್ತುಕ್ರಮ/ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲಾಗುತ್ತದೆ.

19. ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ಸಿಜಿಪಿಎ/ ಜಿಪಿಎ ವ್ಯವಸ್ಥೆಯ ಅಡಿಯಲ್ಲಿ ಪದವಿಗಳನ್ನು ಪಡೆದ ಅಭ್ಯರ್ಥಿಗಳು ಸಿಜಿಪಿಎ/ ಜಿಪಿಎ ಅನ್ನು ಸೂಕ್ತ ಶೇಕಡಾವಾರುಗೆ ಪರಿವರ್ತಿಸಲು ವಿಶ್ವವಿದ್ಯಾಲಯ/ ಸಂಸ್ಥೆಯ ಮಾರ್ಗ ಸೂಚಿಗಳ ಪ್ರಕಾರ ಪಡೆದ ಅಂಕಗಳ ಸರಿಯಾದ ಶೇಕಡಾವಾರು ಪ್ರಮಾಣವನ್ನು ಸಲ್ಲಿಸಬೇಕಾಗುತ್ತದೆ. ದಾಖಲೆಗಳನ್ನು ಪರಿಶೀಲಿಸುವ ಸಮಯದಲ್ಲಿ (ವಿಶ್ವವಿದ್ಯಾಲಯ/ಸಂಸ್ಥೆಯಿಂದ ನೀಡಲಾದ ಪತ್ರ) ಇದನ್ನು ಸಲ್ಲಿಸಬೇಕು.

20. ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ವಿವಾದವು ಬೆಂಗಳೂರಿನ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಗೌರವಾನ್ವಿತ ನ್ಯಾಯಾಲಯ/ಟ್ರಿಬ್ಯೂನಲ್‌ಗೆ ಒಳಪಟ್ಟಿರುತ್ತದೆ.

21. ಇಂಗ್ಲಿಷ್ ಮತ್ತು ಇತರ ಭಾಷೆಯ ಅಧಿಸೂಚನೆಯ ಆವೃತ್ತಿಗಳ ನಡುವಿನ ವ್ಯಾಖ್ಯಾನದ ಕಾರಣದಿಂದಾಗಿ ಯಾವುದೇ ಅಸ್ಪಷ್ಟತೆ/ವಿವಾದಗಳು ಉದ್ಭವಿಸಿದರೆ, ಇಂಗ್ಲಿಷ್ ಆವೃತ್ತಿಯಲ್ಲಿ ವಿವರಿಸಲಾದ ಸೂಚನೆಗಳು ಅಂತಿಮವಾಗಿರುತ್ತದೆ.

22. ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ನೇಮಕಾತಿ ಪೋರ್ಟಲ್ **29/04/2023** ರಿಂದ **28/05/2023** ರವರೆಗೆ ತೆರೆದಿರುತ್ತದೆ.

ಆಸಕ್ತರು ಪ್ರಮಾಣೀಕೃತ ಪೋಷಕ ದಾಖಲೆಗಳ ಪ್ರತಿಗಳೊಂದಿಗೆ **28/05/2023** ರ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವಿನಂತಿಸಲಾಗಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸಂಸ್ಥೆಯ ಜಾಲತಾಣ: **http://recruitment.iisc.ac.in/NonTeaching/** ಕ್ಕೆ ಭೇಟಿ ನೀಡಿ.

**Link to apply online: http://recruitment.iisc.ac.in/NonTeaching/**

**ಕುಲಸಚಿವರು**